# ಸುರತ್ಕಲ್‌ನಲ್ಲಿ ಪಕ್ಷಿ ನಡಿಗೆ ಕಾರ್ಯಕ್ರಮ



**ಸುರತ್ಕಲ್, ಫೆ. 20:** ಅರ್ಲಿ ಬರ್ಡ್ ಮತ್ತು ಅಟಾವಿ ಬರ್ಡ್ ಫೌಂಡೇಶನ್ ವತಿಯಿಂದ ನಗರದ ಸುರತ್ಕಲ್‌ನ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಪಕ್ಷಿ ನಡಿಗೆ ಕಾರ್ಯಕ್ರಮ ನಡೆಯಿತು.

ಫೆಬ್ರವರಿ ಮಧ್ಯ ಭಾಗದಲ್ಲಿ ವಾರ್ಷಿಕವಾಗಿ ನಡೆಸುವ ಜಾಗತಿಕ ಸಮುದಾಯ ವಿಜ್ಞಾನ ಕಾರ್ಯಕ್ರಮವಾದ ಗ್ರೇಟ್ ಬ್ಯಾಕ್‌ಯಾರ್ಡ್ ಬರ್ಡ್ ಕೌಂಟ್ 2025 ಎರಡು ದಿನಗಳ ಕಾಲ ಆಯೋಜಿಸಲಾಗಿತ್ತು.

ಶಿಕ್ಷಕ ಹಾಗೂ ಪಕ್ಷಿ ತಜ್ಞ ಅರವಿಂದ ಕುಡ್ಲನೇತೃತ್ವದಲ್ಲಿನಡೆದ ಅಧಿವೇಶನವು ಪ್ರಕೃತಿ ವೀಕ್ಷಣೆಯೊಂದಿಗೆ ಆರಂಭವಾಯಿತು. ಅನಂತರ 60 ನಿಮಿಷಗಳ ಪ್ರಕೃತಿ ನಡಿಗೆಯಲ್ಲಿ ಮಕ್ಕಳು ಪಕ್ಷಿ ವೀಕ್ಷಣೆಯಲ್ಲಿ ತೊಡಗಿದ್ದರು. ಅವರು ಗಮನಿಸಿದ ಪಕ್ಷಿಗಳ ಗಾತ್ರ, ಬಣ್ಣ ಮತ್ತು ನಡವಳಿಕೆಯನ್ನು ಗಮನಿಸಿದರು.. ಭಾಗವಹಿಸುವವರನ್ನು ಎರಡು ಗುಂಪುಗಳಾಗಿ ವಿಂಗಡಿಸಿ ಒಂದು ಗುಂಪು ಬರ್ಡ್ ಸರ್ವೈವಲ್ ಆಟವನ್ನು ಆಡಿತು ಮತ್ತು ಇನ್ನೊಂದು ಗುಂಪು ಅರ್ಲಿ ಬರ್ಡ್ ಫ್ಲ್ಯಾಷ್‌ಕಾರ್ಡ್ ಆಟವನ್ನು ಆಡಿತು. ಮಕ್ಕಳ ಹೆತ್ತವರು ಭಾಗವಹಿಸಿದ್ದರು. 9ರಿಂದ 13 ವರ್ಷದ ಮಕ್ಕಳು ಭಾಗವಹಿಸಿದ್ದರು.

Udayavani,Date.21/02/25.p.no.02